# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು – 560 001

**ಅಧಿಸೂಚನೆ ಸಂಖ್ಯೆ: ಕವಿನಿಆ/ಸಿಓಎಸ್/ಡಿ/2/16-17, ಬೆಂಗಳೂರು, ದಿನಾಂಕ: 22.11.2016**

## ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಓಎಸ್) (ಐದನೇ ತಿದ್ದುಪಡಿ), 2016

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತು (ಸಿಓಎಸ್)ಗಳನ್ನು 2006ರ 17ನೇ ಜೂನ್‌ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿಸಲಾಗಿತ್ತು. ತದನಂತರ, ಒಂದನೇ, ಎರಡನೇ, ಮೂರನೇ ಮತ್ತು ನಾಲ್ಕನೇ ತಿದ್ದುಪಡಿಗಳನ್ನು ಅನುಕ್ರಮವಾಗಿ 20ನೇ ಮಾರ್ಚ್, 2008; 22ನೇ ಜುಲೈ, 2010; 26ನೇ ಆಗಸ್ಟ್ 2015; ಮತ್ತು 28ನೇ ಜನವರಿ 2016 ರಂದು ಅಧಿಸೂಚಿಸಲಾಗಿತ್ತು.

ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಿಗೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡುವುದು ಅವಶ್ಯವೆಂದು ಕಂಡು ಬಂದಂತೆ, ಭಾಗೀದಾರರಿಂದ ಆಕ್ಷೇಪಣೆಗಳು/ಸಲಹೆಗಳು/ಅಭಿಪ್ರಾಯಗಳನ್ನು ಆಹ್ವಾನಿಸಲಾಗಿತ್ತು. ಅಂಥ ಕರಡು ತಿದ್ದುಪಡಿಗಳನ್ನು (ಐದನೇ ತಿದ್ದುಪಡಿ) ಅಧಿಸೂಚನೆ ಸಂಖ್ಯೆ ಕವಿನಿಆ/ಸಿಓಎಸ್/ಡಿ/2/16-17, ಬೆಂಗಳೂರು, ದಿನಾಂಕ: 30.06.2016ರಂದು ಅಧಿಸೂಚಿಸಿ, ಸದರಿ ಕರಡು ತಿದ್ದುಪಡಿಯನ್ನು, ಸಾರ್ವಜನಿಕರ/ಆಸಕ್ತ ವ್ಯಕ್ತಿಗಳ ಮಾಹಿತಿಗಾಗಿ, ಆಯೋಗದ ಅಂತರ್ಜಾಲತಾಣ: **www.karnataka.gov.in/kerc**ಯಲ್ಲಿ ಪ್ರಕಟಿಸಲಾಗಿತ್ತು ಮತ್ತು ದಿನಪತ್ರಿಕೆಗಳಲ್ಲಿ ಸಹಾ ಪ್ರಕಟಿಸಿತ್ತು. ಆಯೋಗವು, ಭಾಗೀದಾರರಿಂದ ಆಕ್ಷೇಪಣೆಗಳು / ಸಲಹೆಗಳು / ಅಭಿಪ್ರಾಯಗಳನ್ನು ಸ್ವೀಕರಿಸಿದೆ. ಈ ವಿಷಯದಲ್ಲಿ ದಿನಾಂಕ: 19.10.2016ರಂದು, ಆಯೋಗವು 'ಸಾರ್ವಜನಿಕ ವಿಚಾರಣೆ'ಯನ್ನೂ ಸಹ ನಡೆಸಿದೆ. ಭಾಗೀದಾರರಿಂದ ಸ್ವೀಕರಿಸಿದ ಅಭಿಪ್ರಾಯಗಳು /ಸಲಹೆಗಳು /ಆಕ್ಷೇಪಣೆಗಳನ್ನು ಆಯೋಗವು ಪರಿಗಣಿಸಿದೆ.

ಈಗ, ಆದುದರಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 16ರ ಜೊತೆಗೆ ಓದಲಾದ 2004ರ ಕ.ವಿ.ನಿ.ಆ. (ವಿದ್ಯುತ್ ಸರಬರಾಜು ಕಂಪನಿಗಳಿಗೆ ಪರವಾನಿಗೆ ಷರತ್ತುಗಳು) ವಿನಿಯಮಗಳ 7.3ನೇ ಷರತ್ತಿನಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರ ಮತ್ತು ಈ ಸಂಬಂಧ ಸಕ್ರಿಯಗೊಳಿಸುವ ಎಲ್ಲಾ ಅಧಿಕಾರವನ್ನು ಚಲಾಯಿಸಿ 2006ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳಿಗೆ ಈ ಮುಂದಿನ ತಿದ್ದುಪಡಿಗಳನ್ನು ಮಾಡುತ್ತದೆ:

**I ಶೀರ್ಷಿಕೆ ಮತ್ತು ಪ್ರಾರಂಭ:**

(ಎ) ಇದನ್ನು, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಓಎಸ್) (ಐದನೇ ತಿದ್ದುಪಡಿ), 2016 ಎಂದು ಕರೆಯಬಹುದಾಗಿದೆ.

(ಬಿ) ಇದು, ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಿತರಣಾ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ಪರವಾನಿಗೆದಾರರಿಗೆ ಮತ್ತು ವಿದ್ಯುಚ್ಛಕ್ತಿ ಬಳಕೆದಾರರಿಗೆ ಅನ್ವಯಿಸುತ್ತದೆ.

(ಸಿ) ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಇದನ್ನು ಪ್ರಕಟಿಸಿದ ದಿನಾಂಕದಿಂದ, ಇದು ಜಾರಿಗೆ ಬರುತ್ತದೆ.

**II** **ಕೆಳಗಿನ ಕೋಷ್ಟಕದ ಕಲಮು 2ರಲ್ಲಿರುವ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ಹಾಲಿ ಖಂಡವನ್ನು ಕಲಮು 3ರಲ್ಲಿರುವ ಖಂಡದಂತೆ ಪ್ರತಿಷ್ಠಾಪಿಸಲಾಗಿದೆ.**

| 1 | 2 | 3 |
|---|---|---|
| ಖಂಡ | **ಹಾಲಿಯಿರುವ ಷರತ್ತು** | **ಸೇರಿಸಿದ / ತಿದ್ದುಪಡಿಯಾದ ಷರತ್ತು** |
| 7.03 | ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ/ ಕಿಯೋನಿಕ್ಸ್/ ಇತರರು ಅಭಿವೃದ್ಧಿಪಡಿಸಿದ ಕೈಗಾರಿಕಾ ಬಡಾವಣೆಗಳಿಗೆ, ಪರವಾನಿಗೆದಾರನು ತಯಾರಿಸಿದ ಅಂದಾಜುಪಟ್ಟಿಯ ಪ್ರಕಾರ ಅರ್ಜಿದಾರನು ಸ್ವಯಂ ಕಾರ್ಯಯೋಜನೆಯಲ್ಲಿ ಎಚ್.ಟಿ/ ಎಲ್.ಟಿ ಮಾರ್ಗಗಳು, ಪರಿವರ್ತಕಗಳು ಮುಂತಾದ ಸಂಪೂರ್ಣ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು. ಸಿಬ್ಬಂದಿ ವೆಚ್ಚ, ಮಾಪಕ ಭದ್ರತಾ ಠೇವಣಿಯನ್ನು ಹೊರತುಪಡಿಸಿ ಅಂದಾಜು ವೆಚ್ಚದ ಮೇಲೆ ರೂ. 15 ಲಕ್ಷ ಗರಿಷ್ಠ ಮಿತಿಗೊಳಪಟ್ಟು ಶೇ.10ರಂತೆ ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಕವಿನಿಆ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, 2004 ಹಾಗೂ ಕಾಲಕಾಲಕ್ಕೆ ಇದರ ತಿದ್ದುಪಡಿಗಳ (ಅನುಬಂಧ–2) ಪ್ರಕಾರ ವಿದ್ಯುತ್ ಸರಬರಾಜು ವೆಚ್ಚಗಳನ್ನು ವಸೂಲು ಮಾಡತಕ್ಕದ್ದಲ್ಲ. | **ಕೈಗಾರಿಕಾ ಪ್ರದೇಶದ ಭಾಗವಾಗಿ ಉದ್ಯಮಿಗಳ ಉಪಯೋಗಕ್ಕೆ ನಿರ್ಮಿಸಿದ ವಸತಿ ಕಟ್ಟಡಗಳನ್ನು ಒಳಗೊಂಡಂತೆ** ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ /ಕಿಯೋನಿಕ್ಸ್ / ಇತರರು ಅಭಿವೃದ್ಧಿಪಡಿಸಿದ ಕೈಗಾರಿಕಾ ಬಡಾವಣೆಗಳಿಗೆ, ಪರವಾನಿಗೆದಾರನು ತಯಾರಿಸಿದ ಅಂದಾಜುಪಟ್ಟಿಯ ಪ್ರಕಾರ ಅರ್ಜಿದಾರನು ಸ್ವಯಂ ಕಾರ್ಯಯೋಜನೆಯಲ್ಲಿ 11 ಕೆ.ವಿ ಮಾರ್ಗ/ ಭೂಗತ ಕೇಬಲ್ / ಎ.ಬಿ. ಕೇಬಲ್, ಎಲ್.ಟಿ ಮಾರ್ಗ/ ಭೂಗತ ಕೇಬಲ್ / ಎ.ಬಿ. ಕೇಬಲ್, ಪರಿವರ್ತಕಗಳು ಮುಂತಾದ ಸಂಪೂರ್ಣ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು. ಸಿಬ್ಬಂದಿ ವೆಚ್ಚ, ಮಾಪಕ ಭದ್ರತಾ ಠೇವಣಿಯನ್ನು ಹೊರತುಪಡಿಸಿ ಅಂದಾಜು ವೆಚ್ಚದ ಮೇಲೆ ರೂ. 15 ಲಕ್ಷ ಗರಿಷ್ಠ ಮಿತಿಗೊಳಪಟ್ಟು, ಶೇ.10ರಂತೆ ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಇಂತಹ ಪ್ರಕರಣಗಳಲ್ಲಿ **ಒಟ್ಟು ಅಂದಾಜು ವೆಚ್ಚದ ಮೇಲೆ ಶೇ.5ರ ನಿರ್ವಹಣಾ ಶುಲ್ಕಗಳು ಮತ್ತು** ಕಾಲಕಾಲಕ್ಕೆ ತಿದ್ದುಪಡಿಗಳನ್ನು ಸೇರಿದಂತೆ ಕವಿನಿಆ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು 2004ರ ಪ್ರಕಾರ ವಿದ್ಯುತ್ ಸರಬರಾಜು ವೆಚ್ಚಗಳನ್ನು ವಸೂಲು ಮಾಡತಕ್ಕದ್ದಲ್ಲ. |
| 7.06 (ಹೊಸದು) | – | **ತನ್ನ ಆವರಣದ ಒಂದು ಭಾಗವನ್ನು ಬಾಡಿಗೆ ಕೊಡಲು ಅಪೇಕ್ಷಿಸುವ ಎಲ್‌ಟಿ ಕೈಗಾರಿಕಾ ಬಳಕೆದಾರನು ತನ್ನ ಆವರಣದೊಳಗೆ ತನ್ನ ಬಾಡಿಗೆದಾರ ಸದರಿ ಗ್ರಾಹಕನಿಗೆ ಅನ್ವಯವಾಗುವ ಸಮಾನ ದರದಲ್ಲಿ ವಿದ್ಯುತ್ ಉಪಯೋಗಿಸುವುದನ್ನು ಮತ್ತು ಪರವಾನಿಗೆದಾರನು ಅನುಮೋದಿಸಿದಂತೆ ಉಪ–ಮೀಟರ್ ಮುಖಾಂತರ ಅಂಥ ಬಾಡಿಗೆದಾರನಿಂದ ಯಾವುದೇ ಲಾಭ ನಷ್ಟವಿಲ್ಲದ ಆಧಾರದ ಮೇಲೆ (ಅಂದರೆ, ವಿದ್ಯುತ್ ಬಿಲ್ಲಿನ ಹಂಚಿಕೆ ಮಾಡಿಕೊಳ್ಳುವುದು) ವಿದ್ಯುತ್‌ಗಾಗಿ ವೆಚ್ಚವನ್ನು ವಸೂಲಿ ಮಾಡಲು ಅನುಮತಿಸತಕ್ಕದ್ದು ಹಾಗೂ ಅಂಥ ವ್ಯವಸ್ಥೆಯನ್ನು ಅನಧಿಕೃತ ವಿದ್ಯುತ್ ವಿಸ್ತರಣೆ ಅಥವಾ ವಿದ್ಯುತ್ ಮರುಮಾರಾಟ ಎಂದು ಪರಿಗಣಿಸತಕ್ಕದ್ದಲ್ಲ.<br>ಪರಂತು, ಬಿಲ್ ನೀಡಲು, ಜಾರಿಯಲ್ಲಿರುವ ದರ ಆದೇಶದಂತೆ ಶ್ರೇಣಿ ದರಗಳ (slab rates) ಪ್ರಕಾರ ಮುಖ್ಯ ಮೀಟರ್‌ನಲ್ಲಿ ದಾಖಲಾದ ಬಳಕೆಯನ್ನು ಪರಿಗಣಿಸತಕ್ಕದ್ದು:** |
| 8.14 | **i)** ಎಚ್.ಟಿ./ಇ.ಎಚ್.ಟಿ. ಬಳಕೆದಾರರಿಗೆ, ಸಂದರ್ಭಾನುಸಾರ ಕರಾರು ಮಾಡಿಕೊಂಡ ಬೇಡಿಕೆ ಅಥವಾ ಅನುಮೋದಿಸಿದ ಗರಿಷ್ಠ ಬೇಡಿಕೆ/ವಿದ್ಯುಚ್ಛಕ್ತಿ ಬೇಡಿಕೆ (entitlement) ಹಕ್ಕನ್ನು ಮೀರದೆ, ನಿರ್ಮಾಣ ಕಾಮಗಾರಿಗಳು | **i)** ಎಚ್.ಟಿ./ಇ.ಎಚ್.ಟಿ. ಬಳಕೆದಾರರಿಗೆ, ಸಂದರ್ಭಾನುಸಾರ ಕರಾರು ಮಾಡಿಕೊಂಡ ಬೇಡಿಕೆ ಅಥವಾ ಅನುಮೋದಿಸಿದ ಗರಿಷ್ಠ ಬೇಡಿಕೆ/ವಿದ್ಯುಚ್ಛಕ್ತಿ ಬೇಡಿಕೆ (entitlement) ಹಕ್ಕನ್ನು ಮೀರದೆ, ನಿರ್ಮಾಣ ಕಾಮಗಾರಿಗಳು |

| | | |
|---|---|---|
| | ಒಳಗೊಂಡಂತೆ, ಯಾವುದೇ ಸದುದ್ದೇಶಗಳಿಗೆ ಅವರ ಆವರಣಗಳೊಳಗೆ ವಿದ್ಯುಚ್ಛಕ್ತಿಯನ್ನು ಬಳಸಲು ಅನುಮತಿ ನೀಡಲಾಗಿದೆ.<br><br>ii) ಸಂದರ್ಭಾನುಸಾರ, ಆವರಣದ ಒಂದು ಭಾಗವನ್ನು, ವಾಸದ ಅಥವಾ ವಾಣಿಜ್ಯದ ಉದ್ದೇಶಕ್ಕಾಗಿ ಬಳಸಲು ಅಪೇಕ್ಷಿಸುವ ಎಚ್.ಟಿ./ಇ.ಎಚ್.ಟಿ. ಬಳಕೆದಾರರಿಗೆ ಎಲ್‌ಟಿ ಉಪ–ಮೀಟರ್ ಮುಖಾಂತರ ಅವರ ಆವರಣಗಳೊಳಗೆ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಲು ಅನುಮತಿ ನೀಡತಕ್ಕದ್ದು. ಉಪ–ಮೀಟರ್‌ನಲ್ಲಿ ಹಾಗೆ ದಾಖಲಿಸಿದ ವಿದ್ಯುಚ್ಛಕ್ತಿ ಬಳಕೆ ಪ್ರಮಾಣವನ್ನು, ಮುಖ್ಯ ಮೀಟರ್‌ನಲ್ಲಿ ದಾಖಲಿಸಿದ ಬಳಕೆ ಪ್ರಮಾಣದಿಂದ ಕಳೆಯತಕ್ಕದ್ದು ಮತ್ತು ಉಪ–ಮೀಟರ್‌ನಲ್ಲಿ ದಾಖಲಾದ ಬಳಕೆ ಪ್ರಮಾಣಕ್ಕೆ, ಜಾರಿಯಲ್ಲಿರುವ ಎಲ್‌ಟಿ ವಾಸದ ಅಥವಾ ವಾಣಿಜ್ಯ ಜಕಾತಿಗೆ ಅನ್ವಯವಾಗಬಹುದಾದ ವಿದ್ಯುಚ್ಛಕ್ತಿ ಬಳಕೆ ಶುಲ್ಕಗಳ ಪ್ರಕಾರ, ಬಿಲ್ ಮೊತ್ತವನ್ನು ವಿಧಿಸತಕ್ಕದ್ದು. ಅಂಥ ಸಂದರ್ಭಗಳಲ್ಲಿ ಯಾವುದೇ ನಿಗದಿತ ಶುಲ್ಕವನ್ನು ಎಲ್‌ಟಿ ವಾಸದ ಅಥವಾ ವಾಣಿಜ್ಯ ಲೋಡ್‌ನ ಮೇಲೆ ವಿಧಿಸುವಂತಿಲ್ಲ. | ಒಳಗೊಂಡಂತೆ, ಯಾವುದೇ ಸದುದ್ದೇಶಗಳಿಗೆ ಅವರ ಆವರಣಗಳೊಳಗೆ ವಿದ್ಯುಚ್ಛಕ್ತಿಯನ್ನು ಬಳಸಲು ಅನುಮತಿ ನೀಡಲಾಗಿದೆ.<br><br>ii) ಸಂದರ್ಭಾನುಸಾರ, ಆವರಣದ ಒಂದು ಭಾಗವನ್ನು, ವಾಸದ ಅಥವಾ ವಾಣಿಜ್ಯದ ಉದ್ದೇಶಕ್ಕಾಗಿ ಬಳಸಲು ಅಪೇಕ್ಷಿಸುವ ಎಚ್.ಟಿ./ಇ.ಎಚ್.ಟಿ. ಬಳಕೆದಾರರಿಗೆ ಎಲ್‌ಟಿ ಉಪ–ಮೀಟರ್ ಮುಖಾಂತರ ಅವರ ಆವರಣಗಳೊಳಗೆ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಲು ಅನುಮತಿಸತಕ್ಕದ್ದು. ಉಪ–ಮೀಟರ್‌ನಲ್ಲಿ ಹಾಗೆ ದಾಖಲಿಸಿದ ವಿದ್ಯುಚ್ಛಕ್ತಿ ಬಳಕೆ ಪ್ರಮಾಣವನ್ನು, ಮುಖ್ಯ ಮೀಟರ್‌ನಲ್ಲಿ ದಾಖಲಿಸಿದ ಬಳಕೆ ಪ್ರಮಾಣದಿಂದ ಕಳೆಯತಕ್ಕದ್ದು ಮತ್ತು ಉಪ–ಮೀಟರ್‌ನಲ್ಲಿ ದಾಖಲಾದ ಬಳಕೆ ಪ್ರಮಾಣಕ್ಕೆ, ಜಾರಿಯಲ್ಲಿರುವ ಎಲ್‌ಟಿ ವಾಸದ ಅಥವಾ ವಾಣಿಜ್ಯ ಜಕಾತಿಗೆ ಅನ್ವಯವಾಗಬಹುದಾದ ವಿದ್ಯುಚ್ಛಕ್ತಿ ಬಳಕೆ ಶುಲ್ಕಗಳ ಪ್ರಕಾರ, ಬಿಲ್ ಮಾಡತಕ್ಕದ್ದು. ಅಂಥ ಸಂದರ್ಭಗಳಲ್ಲಿ ಯಾವುದೇ ನಿಗದಿತ ಶುಲ್ಕವನ್ನು ಎಲ್‌ಟಿ ವಾಸದ ಅಥವಾ ವಾಣಿಜ್ಯ ಲೋಡ್‌ನ ಮೇಲೆ ವಿಧಿಸುವಂತಿಲ್ಲ.<br><br>**iii) ತನ್ನ ಆವರಣದ ಒಂದು ಭಾಗವನ್ನು ಕೈಗಾರಿಕೆ ಉದ್ದೇಶಕ್ಕಾಗಿ ಬಾಡಿಗೆ ಕೊಡಲು ಅಪೇಕ್ಷಿಸುವ ಎಚ್.ಟಿ./ಇ.ಎಚ್.ಟಿ ಬಳಕೆದಾರನು ತನ್ನ ಬಾಡಿಗೆದಾರ ಸದರಿ ಗ್ರಾಹಕನಿಗೆ ಅನ್ವಯವಾಗುವ ಸಮಾನ ದರದಲ್ಲಿ ವಿದ್ಯುತ್ ಉಪಯೋಗಿಸುವುದನ್ನು ಮತ್ತು ಪರವಾನಿಗೆದಾರನು ಅನುಮೋದಿಸಿದಂತ ಉಪ–ಮೀಟರ್ ಮುಖಾಂತರ ಅಂಥ ಬಾಡಿಗೆದಾರನಿಂದ ಯಾವುದೇ ಲಾಭ ನಷ್ಟವಿಲ್ಲದ ಆಧಾರದ ಮೇಲೆ (ಅಂದರೆ ವಿದ್ಯುಚ್ಛಕ್ತಿ ಬಿಲ್ಲಿನ ಹಂಚಿಕೆ ಮಾಡಿಕೊಳ್ಳುವುದು) ವಿದ್ಯುತ್‌ಗಾಗಿ ವೆಚ್ಚವನ್ನು ವಸೂಲಿ ಮಾಡಲು ಅನುಮತಿಸತಕ್ಕದ್ದು ಹಾಗೂ ಅಂಥ ವ್ಯವಸ್ಥೆಯನ್ನು ಅನಧಿಕೃತ ವಿದ್ಯುತ್ ವಿಸ್ತರಣೆ ಅಥವಾ ವಿದ್ಯುತ್ ಮರುಮಾರಾಟ ಎಂದು ಪರಿಗಣಿಸತಕ್ಕದ್ದಲ್ಲ.<br><br>ಪರಂತು, ಬಿಲ್ ನೀಡಲು ಜಾರಿಯಲ್ಲಿರುವ ದರ ಆದೇಶದಂತೆ ಶ್ರೇಣಿ ದರಗಳ (slab rates) ಪ್ರಕಾರ ಮುಖ್ಯ ಮೀಟರ್‌ನಲ್ಲಿ ದಾಖಲಾದ ಬಳಕೆಯನ್ನು ಪರಿಗಣಿಸತಕ್ಕದ್ದು.** |
| 9.07 | 6) ಬದಲಿ ವಿದ್ಯುತ್ ಸರಬರಾಜು ಹೊಂದುವುದಕ್ಕಾಗಿ, ಅರ್ಜಿದಾರನು ಎರಡು ಕೇಬಲ್ ಮಾರ್ಗಗಳನ್ನು ಒದಗಿಸತಕ್ಕದ್ದು. ಅಂಥ ವ್ಯವಸ್ಥೆ ಹೀಗಿರತಕ್ಕದ್ದು:<br>• ಬದಲಿ ಸರಬರಾಜಿಗಾಗಿ ಎರಡು ಮಾರ್ಗಗಳ ಕೇಬಲ್<br>• ವಿದ್ಯುತ್ ಸರಬರಾಜು ಕೇಬಲ್ಲಿನ ಅಂತ್ಯ | 6) ಬದಲಿ ವಿದ್ಯುತ್ ಸರಬರಾಜು ಹೊಂದುವುದಕ್ಕಾಗಿ, ಅರ್ಜಿದಾರನು ಎರಡು ಕೇಬಲ್ ಮಾರ್ಗಗಳನ್ನು ಒದಗಿಸತಕ್ಕದ್ದು. ಅಂಥ ವ್ಯವಸ್ಥೆ ಹೀಗಿರತಕ್ಕದ್ದು:<br>• ಬದಲಿ ಸರಬರಾಜಿಗಾಗಿ ಎರಡು ಮಾರ್ಗಗಳ ಎಲ್.ಟಿ. ಕೇಬಲ್<br>• ವಿದ್ಯುತ್ ಸರಬರಾಜು ಕೇಬಲ್ಲಿನ ಅಂತ್ಯ |

| | | |
|---|---|---|
| | ಭಾಗದಲ್ಲಿ ಚೇಂಜ್ ಓವರ್ ಸ್ವಿಚ್ಚು.<br>• ಮಾಸ್ಟರ್ ಮೀಟರಿಂಗ್ ಕ್ಯುಬಿಕಲ್ / ಮಾಸ್ಟರ್ ಮೀಟರ್.<br>ವಿದ್ಯುತ್ ಕಳ್ಳತನ / ದುರ್ಬಳಕೆ ತಡೆಗಟ್ಟಲು ಎಲ್ಲ ಸಲಕರಣೆಗಳಿಗೂ ಮೊಹರು ಹಾಕುವ ಸೌಲಭ್ಯವಿರತಕ್ಕದ್ದು. | ಭಾಗದಲ್ಲಿ ಚೇಂಜ್ ಓವರ್ ಸ್ವಿಚ್ಚು.<br>ವಿದ್ಯುತ್ ಕಳ್ಳತನ / ದುರ್ಬಳಕೆ ತಡೆಗಟ್ಟಲು ಎಲ್ಲ ಸಲಕರಣೆಗಳಿಗೂ ಮೊಹರು ಹಾಕುವ ಸೌಲಭ್ಯವಿರತಕ್ಕದ್ದು. |
| | 10) ಮಂಜೂರಾದ ಲೋಡ್ 25 ಕಿ.ವ್ಯಾ. ಅಥವಾ ಅಧಿಕವಾಗಿರುವ ಅಥವಾ ಕಟ್ಟಡದ ನಿರ್ಮಿತ ಪ್ರದೇಶ 500 ಚದರ ಮೀಟರುಗಳಿಗಿಂತ ಅಧಿಕವಾಗಿದ್ದು, ಖಂಡ 9.00ರ ಅಡಿಯಲ್ಲಿ ವಿದ್ಯುತ್ ಸರಬರಾಜು ಮಂಜೂರಾಗಿರುವ ಎಲ್ಲ ಕಟ್ಟಡಗಳಿಗೆ ವಿದ್ಯುತ್ ಪರಿಶೋಧನೆ ಉದ್ದೇಶಕ್ಕಾಗಿ ಪರವಾನಿಗೆದಾರನು ತನ್ನ ವೆಚ್ಚದಲ್ಲಿ ಬಲ್ಕ್ ಚೆಕ್ ಮೀಟರನ್ನು ಅಳವಡಿಸತಕ್ಕದ್ದು. | 10) ಮಂಜೂರಾದ ಲೋಡ್ **35** ಕಿ.ವ್ಯಾ. ಅಥವಾ ಅಧಿಕವಾಗಿರುವ ಅಥವಾ ಕಟ್ಟಡದ ನಿರ್ಮಿತ ಪ್ರದೇಶ **800** ಚದರ ಮೀಟರುಗಳಿಗಿಂತ ಅಧಿಕವಾಗಿದ್ದು, ಖಂಡ 9.00ರ ಅಡಿಯಲ್ಲಿ ವಿದ್ಯುತ್ ಸರಬರಾಜು ಮಂಜೂರಾಗಿರುವ ಎಲ್ಲ ಕಟ್ಟಡಗಳಿಗೆ ವಿದ್ಯುತ್ ಪರಿಶೋಧನೆ ಉದ್ದೇಶಕ್ಕಾಗಿ ಪರವಾನಿಗೆದಾರನು ತನ್ನ ವೆಚ್ಚದಲ್ಲಿ ಬಲ್ಕ್ ಚೆಕ್ ಮೀಟರನ್ನು ಅಳವಡಿಸತಕ್ಕದ್ದು. |
| 9.11 | ಖಂಡ 9.00ರ ಅಡಿಯಲ್ಲಿ ಮಂಜೂರು ಮಾಡಲ್ಪಟ್ಟ ವಿದ್ಯುತ್ ಸರಬರಾಜಿಗಾಗಿ ಸ್ಥಾಪಿಸಲ್ಪಟ್ಟ ವಿತರಣ ಪರಿವರ್ತಕಗಳ ಲೋಡಿಂಗ್. ಈ ಕೆಳಗಿನಂತಿರತಕ್ಕದ್ದು:<br>ಎ) ಅರ್ಜಿದಾರನ ಆವರಣದಲ್ಲಿ ಸ್ಥಾಪಿಸುವ ವಿತರಣ ಪರಿವರ್ತಕದ ಸಾಮರ್ಥ್ಯವು ವೈವಿಧ್ಯತೆ ಅಂಶ ಒಂದರಂತೆ (ಡೈವರ್ಸಿಟಿ ಫ್ಯಾಕ್ಟರ್ ಆಫ್ ಯೂನಿಟಿ) ಕಟ್ಟಡಕ್ಕೆ ಕೋರಿರುವ ವಿದ್ಯುತ್ ಪ್ರಮಾಣದ ಆಧಾರದ ಮೇಲೆ ಇರತಕ್ಕದ್ದು. | ಖಂಡ 9.00ರ ಅಡಿಯಲ್ಲಿ ಮಂಜೂರು ಮಾಡಲ್ಪಟ್ಟ ವಿದ್ಯುತ್ ಸರಬರಾಜಿಗಾಗಿ ಸ್ಥಾಪಿಸಲ್ಪಟ್ಟ ವಿತರಣ ಪರಿವರ್ತಕಗಳ ಲೋಡಿಂಗ್ ಈ ಕೆಳಗಿನಂತಿರತಕ್ಕದ್ದು:<br>ಎ) ಅರ್ಜಿದಾರನ ಆವರಣದಲ್ಲಿ ಸ್ಥಾಪಿಸಿರುವ ವಿತರಣ ಪರಿವರ್ತಕದ ಸಾಮರ್ಥ್ಯವು ಕಟ್ಟಡಕ್ಕೆ ಕೋರಿರುವ ವಿದ್ಯುತ್ ಪ್ರಮಾಣದ ಆಧಾರದ **ಮೇಲೆ ವಾಣಿಜ್ಯ ಲೋಡ್‌ಗೆ ಸಂಬಂಧಿಸಿದಂತೆ ವೈವಿಧ್ಯತೆ ಅಂಶ ಒಂದು (ಡೈವರ್ಸಿಟಿ ಫ್ಯಾಕ್ಟರ್ ಆಫ್ ಯೂನಿಟಿ) ಮತ್ತು ವಸತಿ ಲೋಡ್‌ಗೆ ಸಂಬಂಧಿಸಿದಂತೆ ವೈವಿಧ್ಯತೆ ಅಂಶ 1.5ರಂತೆ ಇರತಕ್ಕದ್ದು.**<br>**ನಿದರ್ಶನ: 300 ಕೆವಿಎ ವಸತಿ ಉದ್ದೇಶಕ್ಕಾಗಿ ಕೋರಿದ ಲೋಡ್‌ಗೆ ಪರಿವರ್ತಕ ಸಾಮರ್ಥ್ಯ 300 / 1.5 (ಕೋರಿದ ಲೋಡ್ / ಡೈವರ್ಸಿಟಿ ಪ್ಯಾಕ್ಟರ್) 200 ಕೆವಿಎ ಇರತಕ್ಕದ್ದು.**<br>**ಆದರೆ, ಪರವಾನಿಗೆದಾರನು ಅಳವಡಿಸಿಕೊಂಡಿರುವ ಸಾಮಾನ್ಯ ಸಾಮರ್ಥ್ಯವನ್ನು (standard capacity) ಪರಿವರ್ತಕದ ಗಾತ್ರ ನಿರ್ಧರಿಸುವುದಕ್ಕೆ ಪರಿಗಣಿಸತಕ್ಕದ್ದು.** |
| 12.01 | ಎಲ್.ಟಿ. ತಾತ್ಕಾಲಿಕ ವಿದ್ಯುತ್ ಸರಬರಾಜಿಗೆ ಅನ್ವಯ:<br>(ಎ) ಭಾವೀ ಗ್ರಾಹಕನು, ತಾತ್ಕಾಲಿಕ ವಿದ್ಯುತ್ ಸರಬರಾಜು ಪಡೆಯಲು ನಿಗದಿತ ನಮೂನೆಯಲ್ಲಿ . ಅರ್ಜಿಯನ್ನು ಪರವಾನಿಗೆದಾರನ ಶಾಖಾ / ಉಪವಿಭಾಗ ಕಚೇರಿಯಲ್ಲಿ ಸಲ್ಲಿಸತಕ್ಕದ್ದು. ಯಾವುದೇ ನೋಂದಣಿ ಹಾಗೂ ಕಾರ್ಯಪ್ರಕ್ರಿಯೆ ಶುಲ್ಕವನ್ನು ಪಾವತಿಸತಕ್ಕದ್ದಲ್ಲ. ಅವನು, ಖಂಡ 12.01 (ಸಿ) ಪ್ರಕಾರ ಪ್ರತಿ ಸ್ಥಾವರಕ್ಕೆ ರೂ. 50/– ಸೇವಾ ಶುಲ್ಕವನ್ನು ಮತ್ತು | ಎಲ್.ಟಿ. ತಾತ್ಕಾಲಿಕ ವಿದ್ಯುತ್ ಸರಬರಾಜಿಗೆ ಅನ್ವಯ:<br>(ಎ) **(i)ವಿದ್ಯುತ್ ಹೊರೆಯು 50 ಕಿ.ವ್ಯಾ. / 67 ಹೆಚ್.ಪಿ.ಗಿಂತ ಕಡಿಮೆ ಇದ್ದಲ್ಲಿ, ಗ್ರಾಹಕನು ಎಲ್.ಟಿ. ಅಡಿಯಲ್ಲಿ ವಿದ್ಯುತ್ ಸರಬರಾಜು ಪಡೆಯತಕ್ಕದ್ದು, ಹಾಗೂ ವಿದ್ಯುತ್ ಹೊರೆಯು 50 ಕಿ.ವ್ಯಾ. / 67 ಹೆಚ್.ಪಿ. ಮತ್ತು ಅದಕ್ಕಿಂತ ಹೆಚ್ಚಿದ್ದಲ್ಲಿ, ಗ್ರಾಹಕನು ಹೆಚ್.ಟಿ. ವಿದ್ಯುತ್ ಸರಬರಾಜು ಪಡೆಯತಕ್ಕದ್ದು.**<br>(ii) ಭಾವೀ ಗ್ರಾಹಕನು ತಾತ್ಕಾಲಿಕ ವಿದ್ಯುತ್ ಸರಬರಾಜು ಪಡೆಯಲು ನಿಗದಿತ |

| | | |
|---|---|---|
| | ಪ್ರಸಕ್ತ ವಿದ್ಯುತ್ ದರಗಳ ಪ್ರಕಾರ ಮುಂಗಡ ವಿದ್ಯುತ್ ಬಳಕೆ ಅಂದಾಜು ಶುಲ್ಕಗಳನ್ನು ಪಾವತಿಸತಕ್ಕದ್ದು. | ನಮೂನೆಯಲ್ಲಿ ಅರ್ಜಿಯನ್ನು ಎಲ್.ಟಿ. ಸರಬರಾಜಿಗೆ **ಪರವಾನಿಗೆದಾರನ** ಶಾಖಾ / ಉಪವಿಭಾಗ ಕಛೇರಿಯಲ್ಲಿ **ಹಾಗೂ ಹೆಚ್.ಟಿ. ಸರಬರಾಜಿಗೆ ವಿಭಾಗೀಯ ಕಛೇರಿಯಲ್ಲಿ** ಸಲ್ಲಿಸತಕ್ಕದ್ದು. ಯಾವುದೇ ನೋಂದಣಿ ಮತ್ತು ಕಾರ್ಯಪ್ರಕ್ರಿಯೆ ಶುಲ್ಕ ಪಾವತಿಸಬೇಕಾಗಿಲ್ಲ. ಅವನು, ಖಂಡ 12.01 (ಸಿ) ಪ್ರಕಾರ ಪ್ರತಿ ಸ್ಥಾವರಕ್ಕೆ ಎಲ್.ಟಿ. ಸರಬರಾಜಿಗೆ ರೂ.50/– **ಮತ್ತು ಹೆಚ್.ಟಿ. ಸರಬರಾಜಿಗೆ ರೂ.250/–** ಸೇವಾ ಶುಲ್ಕವನ್ನು ಹಾಗೂ ಪ್ರಸಕ್ತ ವಿದ್ಯುತ್ ದರಗಳ ಪ್ರಕಾರ ಮುಂಗಡ ವಿದ್ಯುತ್ ಬಳಕೆ ಅಂದಾಜು ಶುಲ್ಕವನ್ನು ಪಾವತಿಸತಕ್ಕದ್ದು. |
| 12.01 | (ಡಿ) ವಿದ್ಯುತ್ ಗುತ್ತಿಗೆದಾರನ ವೈರಿಂಗ್ ನಕ್ಷೆ ಮತ್ತು ಕಾರ್ಯಸಮಾಪನಾ – ಪರಿಶೀಲನಾ ವರದಿ, ನಿರ್ದಿಷ್ಟಪಡಿಸಿದ ಒಪ್ಪಂದದ ನಮೂನೆ, ಅನುಮತಿ / ಪರವಾನಿಗೆ / ನಿರಾಕ್ಷೇಪ ಇತ್ಯಾದಿ ಪ್ರತಿಗಳನ್ನು ಸ್ವೀಕರಿಸಿ ಅವಶ್ಯ ಮುಂಗಡ ಬಳಕೆ ಶುಲ್ಕವನ್ನು ಪಾವತಿಸಿಕೊಂಡ ನಂತರ ಪರವಾನಿಗೆದಾರನು ತಾತ್ಕಾಲಿಕ ವಿದ್ಯುತ್ ಸರಬರಾಜಿನ ಕಾರ್ಯಾದೇಶವನ್ನು ನೀಡತಕ್ಕದ್ದು.<br><br>**ಟಿಪ್ಪಣಿ:**<br>(1) ನೆಲ ಹೊಳಪು ಮಾಡುವುದು, ನೀರು ಪಂಪ್ ಮಾಡುವುದು, ಮದುವೆಗಳ ಮತ್ತು ಗೃಹ ಸಮಾರಂಭಗಳಿಗೆ ಅನುಮತಿ / ಪರವಾನಿಗೆ / ನಿರಾಕ್ಷೇಪದ ಅವಶ್ಯಕತೆ ಇಲ್ಲ.<br><br>(2) ಒಂದೇ ಸ್ಥಳದಲ್ಲಿ 100 ಅಥವಾ ಹೆಚ್ಚಿನ ಜನರು ಗುಂಪು ಸೇರುವ ಅಥವಾ ನೆರೆಯುವ ಸಂಭವವಿದ್ದಲ್ಲಿ ತಾತ್ಕಾಲಿಕ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮೋದನೆ ಅತ್ಯವಶ್ಯ. | (ಡಿ) ವಿದ್ಯುತ್ ಗುತ್ತಿಗೆದಾರನ ವೈರಿಂಗ್ ನಕ್ಷೆ ಮತ್ತು ಕಾರ್ಯಸಮಾಪನಾ – ಪರಿಶೀಲನಾ ವರದಿ, ನಿರ್ದಿಷ್ಟಪಡಿಸಿದ ಒಪ್ಪಂದದ ನಮೂನೆ, ಅನುಮತಿ / ಪರವಾನಿಗೆ / ನಿರಾಕ್ಷೇಪ ಇತ್ಯಾದಿ ಪ್ರತಿಗಳನ್ನು ಸ್ವೀಕರಿಸಿ ಅವಶ್ಯ ಮುಂಗಡ ಬಳಕೆ ಶುಲ್ಕವನ್ನು ಪಾವತಿಸಿಕೊಂಡ ನಂತರ ಪರವಾನಿಗೆದಾರನು ತಾತ್ಕಾಲಿಕ ವಿದ್ಯುತ್ ಸರಬರಾಜಿನ ಕಾರ್ಯಾದೇಶವನ್ನು ನೀಡತಕ್ಕದ್ದು.<br><br>**ಟಿಪ್ಪಣಿ:**<br>(1) ನೆಲ ಹೊಳಪು ಮಾಡುವುದು, ನೀರು ಪಂಪ್ ಮಾಡುವುದು, ಮದುವೆಗಳ ಮತ್ತು ಗೃಹ ಸಮಾರಂಭಗಳಿಗೆ ಅನುಮತಿ / ಪರವಾನಿಗೆ / ನಿರಾಕ್ಷೇಪದ ಅವಶ್ಯಕತೆ ಇಲ್ಲ.<br><br>(2) ಒಂದೇ ಸ್ಥಳದಲ್ಲಿ 100 ಅಥವಾ ಹೆಚ್ಚಿನ ಜನರು ಗುಂಪು ಸೇರುವ ಅಥವಾ ನೆರೆಯುವ ಸಂಭವವಿದ್ದಲ್ಲಿ ತಾತ್ಕಾಲಿಕ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮೋದನೆ ಅವಶ್ಯವಿರುತ್ತದೆ.<br><br>**(3) ಹೆಚ್.ಟಿ. ತಾತ್ಕಾಲಿಕ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡಲು ವಿದ್ಯುತ್ ಪರಿವೀಕ್ಷಕರ ಅನುಮತಿ ಅವಶ್ಯವಿರುತ್ತದೆ.** |
| 12.01 | (ಇ) 50 ಕಿ.ವ್ಯಾ. ಅಥವಾ ಹೆಚ್ಚಿನ ವಿದ್ಯುತ್ ಹೊರೆಗೆ ಅರ್ಜಿದಾರನು, ವಿದ್ಯುತ್ ಪರವಾನಿಗೆ ಪಡೆದ ಅರ್ಹ ಗುತ್ತಿಗೆದಾರನ ಮೂಲಕ ಅವಶ್ಯವೆಂದು ಕಂಡುಬಂದರೆ ವಿತರಣ ಪರಿವರ್ತಕದ ಸ್ಥಾಪನೆಯೂ ಸೇರಿ ಸೇವಾ ಮಾರ್ಗವನ್ನು ಪರವಾನಿಗೆದಾರನ ಅಂದಾಜು ಪಟ್ಟಿ ಮತ್ತು ತಾಂತ್ರಿಕ ವಿವರಣೆಗಳ ಪ್ರಕಾರ ವಿದ್ಯುತ್ ಸರಬರಾಜು ಸೇವಾ ಮಾರ್ಗವನ್ನು ಸ್ವಯಂ ಕಾರ್ಯ ಯೋಜನೆಯಲ್ಲಿ ನಿರ್ಮಿಸಿಕೊಳ್ಳತಕ್ಕದ್ದು. ಪರವಾನಿಗೆದಾರನಿಗೆ ಪ್ರತಿ ಕೆಲಸಕ್ಕೆ ಕನಿಷ್ಠ ರೂ.100/–ರ ಮಿತಿಗೊಳಪಟ್ಟು | (ಇ) 50 ಕಿ.ವ್ಯಾ.ಗಿಂತ ಕಡಿಮೆ ವಿದ್ಯುತ್ ಹೊರೆಗೆ ಅವಶ್ಯವೆಂದು ಕಂಡುಬಂದರೆ ಮುಖ್ಯ ಸೇವಾ ಮಾರ್ಗ ಮತ್ತು ವಿತರಣ ಪರಿವರ್ತಕಗಳನ್ನು ಸೇರಿದಂತೆ ಸೇವಾ ಮಾರ್ಗವನ್ನು **ಹಾಗೂ 50 ಕಿ.ವ್ಯಾ.ಗಿಂತ ಹೆಚ್ಚಿನ ವಿದ್ಯುತ್ ಹೊರೆಗೆ ಹೆಚ್.ಟಿ. ಮೀಟರಿಂಗ್ ಕ್ಯೂಬಿಕಲ್‌ವರೆಗೆ 11ಕೆ.ವಿ. ಮಾರ್ಗ ಎಳೆಯುವ / ವಿಸ್ತರಣೆಯನ್ನು ಸೇರಿದಂತೆ** ಸೇವಾ ಮಾರ್ಗವನ್ನು ಸ್ಥಾಪಿಸುವ ಕಾಮಗಾರಿಯನ್ನು ಪರವಾನಿಗೆ ಪಡೆದ ಅರ್ಹ ವಿದ್ಯುತ್ ಗುತ್ತಿಗೆದಾರನ ಮೂಲಕ, ಪರವಾನಿಗೆದಾರನ ಅಂದಾಜು ಪಟ್ಟಿ ಮತ್ತು ತಾಂತ್ರಿಕ ವಿವರಣೆಗಳ |

| | | |
|---|---|---|
| | ಅಂದಾಜು ವೆಚ್ಚದ ಮೇಲೆ ಶೇ. 10ರ ಮೇಲ್ವಿಚಾರಣ ಶುಲ್ಕವನ್ನು ಅರ್ಜಿದಾರನು ಪಾವತಿಸತಕ್ಕದ್ದು.<br><br>ಆದಾಗ್ಯೂ, ಪರವಾನಿಗೆದಾರನು ತಾತ್ಕಾಲಿಕ ವಿದ್ಯುತ್ ಸರಬರಾಜು ಮಂಜೂರಾತಿಯ ಆದೇಶವನ್ನು ಹೊರಡಿಸಿದ ನಂತರವಷ್ಟೇ ಸೇವಾ ಮಾರ್ಗ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸತಕ್ಕದ್ದು. ಖಂಡ 23.00ರ ಅಡಿಯಲ್ಲಿ ಅಗತ್ಯಪಡಿಸಿರುವಂತೆ, ಗ್ರಾಹಕನು ಸೂಕ್ತ ಸಾಮರ್ಥ್ಯದ ಕರೆಂಟ್ ಲಿಮಿಟರ್, ಸೂಕ್ತ ಸಾಮರ್ಥ್ಯದ ಅರ್ಥ್ ಲೀಕೇಜ್ ಸರ್ಕ್ಯೂಟ್ ಬ್ರೇಕರು ಹಾಗೂ ಕೆಪಾಸಿಟರುಗಳು ಏನಾದರೂ ಇದ್ದಲ್ಲಿ, ಒದಗಿಸತಕ್ಕದ್ದು. | ಪ್ರಕಾರ ಸ್ವಯಂ ಕಾರ್ಯ ಯೋಜನೆ ಆಧಾರದ ಮೇಲೆ ಕೈಗೊಳ್ಳತಕ್ಕದ್ದು. ಪ್ರತಿ ಕೆಲಸಕ್ಕೆ ಕನಿಷ್ಠ **ರೂ.500/-**ಗಳ ಮಿತಿಗೊಳಪಟ್ಟು ಅಂದಾಜು ವೆಚ್ಚದ ಮೇಲೆ ಶೇ. 10ರ ಮೇಲ್ವಿಚಾರಣ ಶುಲ್ಕವನ್ನು ಪರವಾನಿಗೆದಾರನಿಗೆ ಅರ್ಜಿದಾರನು ಪಾವತಿಸತಕ್ಕದ್ದು.<br><br>ಆದಾಗ್ಯೂ, ಪರವಾನಿಗೆದಾರನು ತಾತ್ಕಾಲಿಕ ವಿದ್ಯುತ್ ಸರಬರಾಜು ಮಂಜೂರಾತಿಯ ಆದೇಶವನ್ನು ಹೊರಡಿಸಿದ ನಂತರವಷ್ಟೇ ಸೇವಾ ಮಾರ್ಗ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸತಕ್ಕದ್ದು. ಖಂಡ 23.00ರ ಅಡಿಯಲ್ಲಿ ಅಗತ್ಯಪಡಿಸಿರುವಂತೆ, ಗ್ರಾಹಕನು **ಎಲ್.ಟಿ. ಸರಬರಾಜಿಗೆ** ಸೂಕ್ತ ಸಾಮರ್ಥ್ಯದ ಕರೆಂಟ್ ಲಿಮಿಟರ್, ಮತ್ತು ತಕ್ಕ ಸಾಮರ್ಥ್ಯದ ಅರ್ಥ್ ಲೀಕೇಜ್ ಸರ್ಕ್ಯೂಟ್ ಬ್ರೇಕರ್ ಹಾಗೂ ಇದ್ದಲ್ಲಿ ಕೆಪಾಸಿಟರುಗಳು ಒದಗಿಸತಕ್ಕದ್ದು.<br>**ಹೆಚ್.ಟಿ. ಸರಬರಾಜಿಗೆ, ಈ ಷರತ್ತುಗಳ ಖಂಡ 8.0ರ ಉಪಬಂಧಗಳನ್ನು ಎಲ್ಲೆಲ್ಲಿ ಅನ್ವಯವಾಗುವಲ್ಲಿ ಪಾಲಿಸತಕ್ಕದ್ದು.** |
| **36.00**<br><br>36.01 | **ಸ್ಥಾವರದ ವರ್ಗಾವಣೆ (ಗ್ರಾಹಕನ ಹೆಸರಿನ ಬದಲಾವಣೆ)**<br>ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಯಾವುದೇ ಸ್ಥಾವರವನ್ನು ಒಬ್ಬ ಗ್ರಾಹಕನಿಂದ ಮತ್ತೊಬ್ಬ ಗ್ರಾಹಕನ ಹೆಸರಿಗೆ ವರ್ಗಾಯಿಸಬಹುದಾಗಿದೆ:<br>(ಎ) ನೋಂದಾಯಿತ ಗ್ರಾಹಕನು, ತನ್ನ ಹೆಸರಿನಲ್ಲಿರುವ ಸ್ಥಾವರವನ್ನು ಹಾಗೂ ಠೇವಣಿಗಳನ್ನೂ ಸಹ ವರ್ಗಾಯಿತನ (ಟ್ರಾನ್ಸ್‌ಪರಿ) ಹೆಸರಿಗೆ ವರ್ಗಾಯಿಸಲು ಒಪ್ಪಿಗೆ ಪತ್ರವನ್ನು ನೀಡತಕ್ಕದ್ದು.<br>**<u>ಟಿಪ್ಪಣಿ:</u>**<br>ನೋಂದಾಯಿತ ಗ್ರಾಹಕನಿಂದ ಒಪ್ಪಿಗೆ ಪತ್ರ ಇಲ್ಲದಿದ್ದಲ್ಲಿ ವರ್ಗಾಯಿತನು ಆ ಸ್ಥಾವರಕ್ಕೆ ಸಂಬಂಧಿಸಿದ ಈ ಕೆಳಗಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಾಜರುಪಡಿಸತಕ್ಕದ್ದು.<br>i) ಸ್ಥಾವರದ ಮಾಲಿಕತ್ವದ ಪುರಾವೆ ರೂಪದಲ್ಲಿ ಮಾರಾಟ ಹಕ್ಕುಪತ್ರ ಅಥವಾ ಪಾಲುದಾರಿಕೆ ಹಕ್ಕು ಪತ್ರ ಅಥವಾ ಖಾತಾ / ಉತ್ತರಾಧಿಕಾರತ್ವ ಅಥವಾ ವಾರಸುದಾರತ್ವದ ದೃಢೀಕರಣ ಅಥವಾ ಕೊನೆಯ ಉಯಿಲು ಪತ್ರ.<br>ii) ವಾಣಿಜ್ಯೇತರ ದೀಪ ಹಾಗೂ ವಾಣಿಜ್ಯೇತರ ಸಂಯುಕ್ತ ದೀಪ ಮತ್ತು ತಾಪನ ಸ್ಥಾವರಗಳಿಗೆ ಮಾತ್ರ ಸಂಬಂಧಿಸಿದಂತೆ ಸ್ವಾಧೀನ ಪುರಾವೆಗಳಾದ ಅಧಿಕಾರ ಪತ್ರ ಅಥವಾ ಇತ್ತೀಚಿನ ಬಾಡಿಗೆ ಪಾವತಿ ಸ್ವೀಕೃತಿ | **36.00 ಸ್ಥಾವರದ ವರ್ಗಾವಣೆ (ಗ್ರಾಹಕನ ಹೆಸರಿನ ಬದಲಾವಣೆ)**<br>36.01 ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಯಾವುದೇ ಸ್ಥಾವರವನ್ನು ಒಬ್ಬ ಗ್ರಾಹಕನಿಂದ ಮತ್ತೊಬ್ಬ ಗ್ರಾಹಕನ ಹೆಸರಿಗೆ ವರ್ಗಾಯಿಸಬಹುದಾಗಿದೆ:<br>(ಎ) ವರ್ಗಾಯಿತನು (ಟ್ರಾನ್ಸ್‌ಫರಿ) ಸ್ಥಾವರಕ್ಕೆ ಸಂಬಂಧಿಸಿದ ಆವರಣದ ಮಾಲೀಕತ್ವ ನಿರೂಪಿಸುವ ಈ ಕೆಳಗಿನ ದಾಖಲೆಗಳಲ್ಲಿ ಯಾವುದೇ ಒಂದನ್ನು ಹಾಜರುಪಡಿಸತಕ್ಕದ್ದು:<br>(i) ನೋಂದಾಯಿತ ಮಾರಾಟ ಪತ್ರ<br>(ii) ನೋಂದಾಯಿತ ಪಾಲುದಾರಿಕೆ ಪತ್ರ<br>(iii) ನೋಂದಾಯಿತ ದಾನ ಪತ್ರ<br>(iv) ಆಡಳಿತಾಧಿಕಾರ ಪತ್ರ, ಪ್ರೊಬೇಟ್ ಅಥವಾ ಸಕ್ಷಮ ಪ್ರಾಧಿಕಾರದಿಂದ ಕೊಡಲಾಗಿರುವ ಹಕ್ಕುದಾರಿಕೆ ಧೃಡೀಕರಣ ಪತ್ರ ಅಥವಾ ನೋಂದಾಯಿತ ಕೊನೆಯ ಉಯಿಲು ಪತ್ರ.<br>(ಬಿ) ವರ್ಗಾಯಿತನು ತನ್ನ ಸ್ಥಾವರಕ್ಕೆ ಸಂಬಂಧಿಸಿದ ಆವರಣದ ಅನುಭೋಗ ನಿರೂಪಿಸುವ ಈ ಕೆಳಗಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಾಜರುಪಡಿಸತಕ್ಕದ್ದು:<br>(i) ಭೋಗ್ಯ ಅಥವಾ ಬಾಡಿಗೆ ಕರಾರು ಪತ್ರ, ಪರವಾನಿಗೆ ಪತ್ರ ಮತ್ತು ಈಗಿನ ನೋಂದಾಯಿತ ಗ್ರಾಹಕನಿಂದ ಸ್ಥಾವರವನ್ನು |

| | | |
|---|---|---|
| | ಅಥವಾ ಭೋಗ್ಯ ಪತ್ರ.<br><br>(ಬಿ) ಅಂಥ ವರ್ಗಾವಣೆಯಿಂದ ಯಾವುದೇ ವಿವಾದಗಳು ಉದ್ಭವಿಸುವ ಸಂಭವವಿದ್ದು, ಪರವಾನಿಗೆದಾರನಿಗೆ ಎಲ್ಲ ರೀತಿಯ ನಷ್ಟ ಭರ್ತಿ ಮಾಡಿಕೊಡುವುದಾಗಿ ವರ್ಗಾಯಿತನು ಅನುಬಂಧ-9ರ ಪ್ರಕಾರ ಮುಚ್ಚಳಿಕೆ ಪತ್ರ ನೀಡತಕ್ಕದ್ದು.<br><br>(ಸಿ) ಸ್ಥಾವರದ ಲೆಕ್ಕದಲ್ಲಿ ಯಾವುದೇ ಬಾಕಿ ಇರತಕ್ಕದ್ದಲ್ಲ.<br><br>(ಡಿ) ವರ್ಗಾಯಿತನು:<br>(i) ಖಂಡ 30.10ರಲ್ಲಿ ನಿರ್ದಿಷ್ಟಪಡಿಸಿರುವಂತೆ ವರ್ಗಾವಣೆ ಶುಲ್ಕವನ್ನು ಪಾವತಿಸತಕ್ಕದ್ದು.<br>(ii) ಖಂಡ 36.01 ಟಿಪ್ಪಣಿ (i) / (ii) ರಲ್ಲಿ ಸೂಚಿಸಿರುವ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.<br>(iii) ಪರವಾನಿಗೆದಾರನೊಂದಿಗೆ ಹೊಸ ವಿದ್ಯುತ್ ಸರಬರಾಜು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.<br>(iv) ಯಾವುದೇ ಶಾಸನದಡಿಯಲ್ಲಿ ಪರವಾನಿಗೆ / ಅನುಮತಿ ಅವಶ್ಯವಿದ್ದಲ್ಲಿ ಸ್ಥಳೀಯ ಪ್ರಾಧಿಕಾರದಿಂದ ಆತನ ಹೆಸರಿಗೆ ನೀಡಲ್ಪಟ್ಟ ಅಂಥ ಪರವಾನಿಗೆ / ಅನುಮತಿಯ ಪ್ರತಿ ಒದಗಿಸತಕ್ಕದ್ದು.<br>(iii) ವರ್ಗಾವಣೆಗೆ ಮುಂಚಿನ ಅವಧಿಗೆ ಸಂಬಂಧಿಸಿದಂತೆ, ಸಹಾ ವರ್ಗಾವಣೆ ಆದ ನಂತರ ಸ್ಥಾವರದ ಲೆಕ್ಕದಲ್ಲಿ ಯಾವುದೇ ಬಾಕಿಯನ್ನು ಪತ್ತೆ ಹಚ್ಚಿದರೆ, ಅಂತಹ ಬಾಕಿಯನ್ನು ಪಾವತಿಸುವುದಾಗಿ ಮುಚ್ಚಳಿಕೆ ಬರೆದುಕೊಡತಕ್ಕದ್ದು.<br>(iv) ನೋಂದಾಯಿತ ಗ್ರಾಹಕನು ಠೇವಣಿಯ ಮೊಬಲಗನ್ನು ವರ್ಗಾಯಿಸಲು ಒಪ್ಪಿಗೆ ಪತ್ರ ಇಲ್ಲದಿದ್ದಲ್ಲಿ, ಹೊಸ ಗ್ರಾಹಕನ ತರಹ ಹೊಸದಾಗಿ ಠೇವಣಿಗಳನ್ನು ಪಾವತಿಸತಕ್ಕದ್ದು.<br>ನೋಂದಾಯಿತ ಗ್ರಾಹಕನು ಠೇವಣಿಯನ್ನು ವರ್ಗಾಯಿಸಬಹುದೆಂದು ಒಪ್ಪಿಗೆ ಪತ್ರವನ್ನು ನೀಡಿದರೆ, ಸ್ಥಾವರ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಹೆಚ್ಚುವರಿ ಠೇವಣಿಯನ್ನು ವಸೂಲು ಮಾಡತಕ್ಕದ್ದಲ್ಲ. | ವರ್ಗಾಯಿತನಿಗೆ ವರ್ಗಾಯಿಸುವ ಒಂದು ಒಪ್ಪಿಗೆ ಪತ್ರ. ಅಂಥ ಒಪ್ಪಿಗೆ ಪತ್ರವನ್ನು ಹಾಜರುಪಡಿಸದಿದ್ದಲ್ಲಿ, ವರ್ಗಾಯಿತನು ಹೊಸ ಗ್ರಾಹಕನಂತೆ ಹೊಸದಾಗಿ ಠೇವಣಿಗಳನ್ನು ಪಾವತಿಸತಕ್ಕದ್ದು.<br>(ii) ಖಂಡ 36.01 (ಬಿ)(i)ರಲ್ಲಿ ಗೊತ್ತುಪಡಿಸಿದಂತೆ ಈಗಿನ ನೋಂದಾಯಿತ ಗ್ರಾಹಕನಿಂದ ಒಪ್ಪಿಗೆ ಪತ್ರ ಇಲ್ಲದಿದ್ದಲ್ಲಿ, ಅಂಥ ವರ್ಗಾವಣೆಯಿಂದ ಉದ್ಭವವಾಗುವ ಎಲ್ಲಾ ವಿವಾದಗಳ ಬಗ್ಗೆ ಪರವಾನಿಗೆದಾರನಿಗೆ ಎಲ್ಲ ರೀತಿಯ ನಷ್ಟ ತುಂಬಿಕೊಡುವುದಾಗಿ ವರ್ಗಾಯಿತನು ಅನುಬಂಧ-9ರ ಪ್ರಕಾರ ಮುಚ್ಚಳಿಕೆ ಪತ್ರ ನೀಡತಕ್ಕದ್ದು.<br><br>(ಸಿ) ಸ್ಥಾವರದ ಲೆಕ್ಕದಲ್ಲಿ ಯಾವುದೇ ಬಾಕಿ ಇರತಕ್ಕದ್ದಲ್ಲ.<br><br>(ಡಿ) ವರ್ಗಾವಣೆಗೆ ಮುಂಚಿನ ಅವಧಿಗೆ ಸಂಬಂಧಿಸಿದಂತೆ, ವರ್ಗಾವಣೆ ಆದ ನಂತರ ಸ್ಥಾವರದ ಲೆಕ್ಕದಲ್ಲಿ ಪತ್ತೆ ಹಚ್ಚಿದ ಯಾವುದೇ ಬಾಕಿಯನ್ನು ಪಾವತಿಸುವುದಾಗಿ ವರ್ಗಾಯಿತನು ಮುಚ್ಚಳಿಕೆ ಬರೆದುಕೊಡತಕ್ಕದ್ದು.<br>(ಇ) ಖಂಡ 30.10ರಲ್ಲಿ ನಿರ್ದಿಷ್ಟಪಡಿಸಿರುವಂತೆ ವರ್ಗಾವಣೆ ಶುಲ್ಕವನ್ನು ವರ್ಗಾಯಿತನು ಪಾವತಿಸತಕ್ಕದ್ದು.<br>(ಎಫ್) ಪರವಾನಿಗೆದಾರನೊಂದಿಗೆ ಹೊಸ ವಿದ್ಯುತ್ ಸರಬರಾಜು ಒಪ್ಪಂದವನ್ನು ವರ್ಗಾಯಿತನು ಮಾಡಿಕೊಳ್ಳತಕ್ಕದ್ದು.<br>(ಜಿ) ಯಾವುದೇ ಶಾಸನದಡಿಯಲ್ಲಿ ಪರವಾನಿಗೆ / ಅನುಮತಿ ಅವಶ್ಯವಿದ್ದಲ್ಲಿ ಸ್ಥಳೀಯ ಪ್ರಾಧಿಕಾರದಿಂದ ಆತನ ಹೆಸರಿಗೆ ನೀಡಲ್ಪಟ್ಟ ಅಂಥ ಪರವಾನಿಗೆ / ಅನುಮತಿಯ ಛಾಯಾಪ್ರತಿಯನ್ನು ವರ್ಗಾಯಿತನು ಒದಗಿಸತಕ್ಕದ್ದು. |

ಆಯೋಗದ ಆದೇಶದ ಮೇರೆಗೆ

ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.